ಇದೇ ತುಂಡಿನಿಂದ ಅದಕ್ಕೆ ಒಂದು ಗತಿ ಕಾಣಿಸದೆ ಬಿಡುವುದಿಲ್ಲ ಎಂದು ನಿಶ್ಚಯಿಸಿದ್ದಳು.

ಅನ್ಯಮನಸ್ಕಳಾಗಿ ಎಷ್ಟೋ ಹೊತ್ತು ಹೊರಗೆ ಶೂನ್ಯದೃಷ್ಟಿ ನೆಟ್ಟು ಯಾವುದೋ ಯೋಚನೆಯಲ್ಲಿ ಮುಳುಗಿದ್ದ ರಂಗಮ್ಮನಿಗೆ ಪಕ್ಕದ ಮನೆಯ ಶಾರದಮ್ಮನ 'ಏ ಕತ್ತಾಳೆ... ಬಂತು ಕಣೇ... ಹದ್ದೂ... ಹುಶ್... ಹುಶ್... ಏ... ಹುಶ್...' ಎಂಬ ಅರಚಾಟದಿಂದ ಥಟ್ಟನೆ ವಾಸ್ತವಕ್ಕೆ ಬಂದಳು. ಹದ್ದು ಎಂಬ ಶಬ್ದ ಕಿವಿಯ ಮೇಲೆ ಬಿದ್ದಾಕ್ಷಣ, ಮೈಯಲ್ಲಿ ಕರೆಂಟ್ ಪಾಸಾದಂತಾಗಿ ಆವೇಶದಿಂದ ರಂಗಮ್ಮಳು ಲಗುಬಗನೆ ಬಾಗಿಲ ಹಿಂದಿದ್ದ ಸೌದೆಯ ತುಂಡನ್ನು ಎತ್ತಿಕೊಂಡು 'ಏಯ್... ಹುಶ್... ಕ್ಕೋ... ಕ್ಕೋ... ಕ್ಕೋ' ಎಂದು ಕೋಳಿಗಳಿಗೆ ಮಾತ್ರ ಅರ್ಥವಾಗುವ ಭಾಷೆಯಲ್ಲಿ 'ಹದ್ದು ಬಂದಿದೆ ಬೇಗ ತಪ್ಪಿಸಿಕೊಳ್ಳಿ' ಎಂಬ ಸಂದೇಶ ರವಾನಿಸುತ್ತಾ ಹೊರಗೆ ಓಡಿಬಂದಳು.

ನೆಲದ ಮೇಲೆ ಲ್ಯಾಂಡ್ ಆಗಲು ಕೆಳಗಿಳಿಯುವ ವಿಮಾನದಂತೆ ಇನ್ನೇನು ಕೋಳಿಯ ಮೇಲೆ ಹದ್ದು ಲ್ಯಾಂಡ್ ಆಗುವ ಸಮಯಕ್ಕೆ ಸರಿಯಾಗಿ, ರಂಗಮ್ಮ ತನ್ನ ಕೈಯಲ್ಲಿದ್ದ ಸೌದೆಯನ್ನು ಬ್ರಹ್ಮಾಸ್ತ್ರದಂತೆ ಹದ್ದಿನತ್ತ ಗುರಿಯಿಟ್ಟು ತೂರಿದಳು. ಇನ್ನೇನು ಕೋಳಿಮರಿಯನ್ನು ಇಕ್ಕಳದಂತಹ ತನ್ನ ಕಾಲುಗಳಿಂದ ಬಂಧಿಸಬೇಕಿದ್ದ ಹದ್ದಿಗೆ, ವೇಗವಾಗಿ ಗದೆಯಂತೆ ತನ್ನತ್ತ ತೂರಿಬರುತ್ತಿರುವ ಸೌದೆಯಿಂದ ಪ್ರಾಣ ಉಳಿಸಿಕೊಳ್ಳುವುದು ಪ್ರಥಮ ಆದ್ಯತೆಯಾಗಿ, ಕೈಗೆ ಸಿಗಲಿದ್ದ ಆಹಾರವನ್ನು ಕಡೆಗಣಿಸಿ, ಬಂದ ದಾರಿಗೆ ಸುಂಕವಿಲ್ಲದಂತೆ ಬಂದಷ್ಟೇ ವೇಗವಾಗಿ ಮತ್ತೆ ಮೇಲೆ ಹಾರಿಹೋಯಿತು.

ಬರಲಿದ್ದ ಅಪಾಯ ಸ್ವಲ್ಪದರಲ್ಲೇ ತಪ್ಪಿದ್ದಕ್ಕೆ ನಿಟ್ಟುಸಿರು ಬಿಡುತ್ತಾ ರಂಗಮ್ಮನು, ಹದ್ದಿನ ದಾಳಿಯಿಂದ ಕಂಗಾಲಾಗಿದ್ದ ಕೋಳಿಗಳನ್ನು ಮತ್ತೆ ಮನೆಯೊಳಗಿನ ಕೋಳಿಗೂಡಿಗೆ ಸೇರಿಸಿದಳು.

'ಇವತ್ತು ನಿನ್ನ ಅದೃಷ್ಟ ಚೆಂದಾಕಿತ್ತು ಕಣೇ ಕತ್ತಾಳೆ, ಇಲ್ಲಾಂದ್ರೆ ತಿರ್ಗ ಕೋಳಿಮರಿ ಕಳ್ಕೋತಿದ್ದೆ' ಎಂದಳು ಶಾರದಮ್ಮ. ಹಲ್ಲು ಕಿರಿಯುತ್ತ ರಂಗಮ್ಮನು ಅವಳು ಹೇಳಿದ ಮಾತಿಗೆ ಹೌದೆನ್ನುವಂತೆ ತಲೆಯಾಡಿಸಿದಳು. ರಂಗಮ್ಮನನ್ನು 'ಕತ್ತಾಳೆ' ಎಂಬ ಅಡ್ಡಹೆಸರಿನಿಂದ ಅವಳ ಎದುರಿಗೇ ಕರೆಯುವ ಧೈರ್ಯವಿದ್ದ ಒಂದಿಬ್ಬರಲ್ಲಿ ಶಾರದಮ್ಮನೂ ಒಬ್ಬಳು. ರಂಗಮ್ಮನು ಮದುವೆಯಾಗಿ ಆ ಊರಿಗೆ ಬಂದಾಗಿನಿಂದ ಅವಳ ಸಕಲ ಕಷ್ಟ-ಸುಖ, ಏಳು-ಬೀಳುಗಳನ್ನು ಕಣ್ಣಾರೆ ಕಂಡವಳು ಮಾತ್ರವಲ್ಲದೇ, ಅವಳ ಕಷ್ಟದ ಸಮಯದಲ್ಲಿ ಅನೇಕ ಬಾರಿ ಸಹಾಯಹಸ್ತವನ್ನು ಚಾಚಿದ್ದ ಶಾರದಮ್ಮನು ರಂಗಮ್ಮನಿಗೆ ನೆರೆಯವಳಿಗಿಂತ ಹೆಚ್ಚಾಗಿ ಆತ್ಮೀಯಳಾಗಿದ್ದಳು.

ರಂಗಮ್ಮನಿಗೆ 'ಕತ್ತಾಳೆ' ಹೆಸರು ತಗಲುಹಾಕಿಕೊಂಡು 'ಕತ್ತಾಳೆ ರಂಗಮ್ಮ' ಆದದ್ದು ಅವಳು ಕತ್ತಾಳೆ ಕೆಲಸಕ್ಕೆ ಸೇರಿಕೊಂಡ ಮೇಲೆಯೇ. ವರ್ಷಕ್ಕೊಮ್ಮ ಊರಿನ ಹೊರಗಡೆ ಕತ್ತಾಳೆಯಿಂದ ನಾರು, ಹಗ್ಗಗಳನ್ನು ಮಾಡುವವರು ಬಂದು ಕ್ಯಾಂಪ್ ಹಾಕುತ್ತಿದ್ದರು. ಸಾಮಾನ್ಯವಾಗಿ ಬೇಸಿಗೆಯ ಕಾಲದಲ್ಲಿ ರೈತರಿಗೆ ಯಾವ ಕೆಲಸವೂ ಇಲ್ಲದ ಸಮಯದಲ್ಲಿ ಬಂದು ನೆಲೆಸಿ, ಹೊಲಗಳ ಬದುಗಳಲ್ಲಿ ಯಥೇಚ್ಛವಾಗಿ ಬೆಳೆದಿರುವ ಕತ್ತಾಳೆಯನ್ನು ರೈತರಿಂದ ಕೊಂಡು, ಅದನ್ನು ಯಂತ್ರದ ಗಾಣದಿಂದ ಅರೆದು, ನಾರು-ಹಗ್ಗಗಳನ್ನು ಮಾಡುತ್ತಿದ್ದರು. ಇದಕ್ಕೆ ಬೇಕಾಗುವ ಕತ್ತಾಳೆಯನ್ನು ಹೊಲಗಳಿಂದ ಕ್ಯಾಂಪಿಗೆ ಹೊತ್ತು ಹಾಕಲು, ನಾರು-ಹಗ್ಗಗಳನ್ನು ತಯಾರು ಮಾಡುವ ಕೆಲಸಕ್ಕೆ ಜನ ಬೇಕಾಗಿದ್ದರು. ಕೈತುಂಬಾ ಕೂಲಿ ಸಿಗುತ್ತಿದ್ದರೂ ಕೂಡ, ಮೈಕೈ ನೋವಿನ ಕೆಲಸವಾದ್ದರಿಂದಲೂ ಮತ್ತು ಕತ್ತಾಳೆ ಅರೆಯುವ ಗಾಣದ ಹತ್ತಿರ ನಿಲ್ಲಲಾಗದಷ್ಟು ಕಮಟು ವಾಸನೆಯಿಂದಲೂ ಯಾರೂ ಕೆಲಸಕ್ಕೆ ಬರುತ್ತಿರಲಿಲ್ಲ. ಈ ಕೆಲಸಕ್ಕೆ ಬರಲು ಗಂಡಾಳುಗಳೇ ಹಿಂದೆಮುಂದೆ ನೋಡುವ ಹೊತ್ತಿನಲ್ಲಿ ಹಣದ ಅವಶ್ಯಕತೆ ಇದ್ದ ರಂಗಮ್ಮನು ಗಂಡಾಳಿನಂತೆ ಪ್ರತೀವರ್ಷ ಕತ್ತಾಳೆಯವರು ಕ್ಯಾಂಪ್ ಮಾಡಿದಾಗಲೆಲ್ಲಾ ಬಂದು ಕೆಲಸ ಮಾಡುತ್ತಿದ್ದುದರಿಂದ ಅವಳಿಗೆ 'ಕತ್ತಾಳೆ ರಂಗಮ್ಮ' ಎಂಬ ಹೆಸರು ಪರ್ಮನೆಂಟ್ ಆಯಿತು.

'ಯಾಕೇ ಕತ್ತಾಳೆ, ಜಾಸ್ತಿ ಬೇಜಾರಾಗಿದ್ದೀಯಾ? ಕೋಳಿನ ಹದ್ದು ಪದೇ ಪದೇ ಹೊತ್ಕೊಂಡೋಗ್ತಿರೋದಕ್ಕಾ, ಇಲ್ಲಾ ಹೊಲಕ್ಕೆ ನಿನ್ನೆ ದನಗಳು ನುಗ್ಗಿ ಹಲಸಂದೆ, ತೊಗರಿನೆಲ್ಲಾ ಹಾಳು ಮಾಡಿದ್ದಕ್ಕಾ? ವರ್ಷ ವರ್ಷ ಹೀಗೆ ನಿನ್ನ ಬೆಳೆನಾ ದನಗಳು ಹಾಳುಮಾಡ್ತಾನೇ ಇದಾವೆ, ಆದರೆ ನಿಂಗೆ ಬುದ್ಧಿಬಂದಿಲ್ಲ. ನಾನು ನಿಂಗೆ ಮೊದಲೇ ಹೇಳ್ದೆ ಹೊಲಕ್ಕೆ